WPP No. SK/UDP/01. D.O.P - 15th of every month from Udupi HPO
ಬೆಲೆ ರೂ.2.50

**ಹೆಬ್ಬಾರ್ ಎಂಟರ್‌ಪ್ರೈಸಸ್**
ಭೂವರಾಹ ಕಾಂಪ್ಲೆಕ್ಸ್, ವಾದಿರಾಜ ರಸ್ತೆ, ಉಡುಪಿ - 576 101.
*ಶುಭ ಸಮಾರಂಭಗಳಿಗೆ ಬೇಕಾಗುವ ಕ್ಯಾಟರಿಂಗ್ ವ್ಯವಸ್ಥೆ, ಶಾಮಿಯಾನ, ಗ್ಯಾಸ್ ಸ್ಟವ್, ಟೇಬಲ್, ಕುರ್ಚಿ, ಪಾತ್ರೆಗಳು ಹಾಗೂ ಇನ್ನಿತರ ಎಲ್ಲಾ ವ್ಯವಸ್ಥೆಗಳನ್ನೂ ಸಕಾಲದಲ್ಲಿ ಒದಗಿಸಲಾಗುವುದು.*
ಫೋನ್ : 2531493 (O), 2530851 (R), ಮೊಬೈಲ್ : 94484 37893

# ಶ್ರೀ ಶಾರದಾ

ಮಾಸಪತ್ರಿಕೆ - 15ನೇ ಜನವರಿ 2008

॥ ಧಿಯೋ ಯೋನಃ ಪ್ರಚೋದಯಾತ್ ॥

Regn.No.KAR/KAN/2000/2758 ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.) ಶ್ರೀ ಶಾರದಾ ಮಂಟಪ, ಕುಂಜಿಬೆಟ್ಟು, ಉಡುಪಿ - 576 102. ☏ 2520754
ಸಂಪುಟ-8 ಸಂಚಿಕೆ-1 ಪುಟಗಳು-8 Registered Under No.KA/SK/UDP/1260/2006-2008 Dated from 01-01-2006 to 31-12-2008.

## ಉಡುಪಿಯಲ್ಲಿ ಸಂಪನ್ನಗೊಂಡ ಪ್ರಥಮ ಸ್ಥಾನಿಕ ಬ್ರಾಹ್ಮಣ ಕನ್ನಡ ಸಾಹಿತ್ಯ ಸಮ್ಮೇಳನ



ನೀಲಾವರ ಲಕ್ಷ್ಮೀನಾರಾಯಣರಾವ್ ಸ್ಥಾನಿಕ ಬ್ರಾಹ್ಮಣ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಉದ್ಘಾಟಿಸಿದರು



ಸ್ಥಾನಿಕ ಬ್ರಾಹ್ಮಣ ಕನ್ನಡ ಸಾಹಿತ್ಯ ಸಮ್ಮೇಳನದ ಸಮಾರೋಪ ಸಮಾರಂಭ

''ಪೂರಕವಾದ ಭಾಷೆ ಬೆಳೆಯಬೇಕು; ಭಾಷೆಯನ್ನು ಉಪಯೋಗಿಸುವ ಜನ ಬೆಳೆಯಬೇಕು; ಆಗ ಸಾಹಿತ್ಯ ಬೆಳೆಯುತ್ತದೆ. ನಾವು ಎಲ್ಲಾ ಭಾಷೆಗಳನ್ನು ಗೌರವಿಸಬೇಕು. ಆದರೆ ನಮ್ಮ ಮಾತೃಭಾಷೆಯನ್ನು ಪ್ರೀತಿಸಬೇಕು'' ಎಂದು ಹಿರಿಯ ಪತ್ರಕರ್ತ, ಕಲಾವಿಮರ್ಶಕ ಶ್ರೀ ಎ. ಈಶ್ವರಯ್ಯ ಕರೆ ನೀಡಿದರು.

ಜನವರಿ 6ರಂದು ಉಡುಪಿಯ ಕುಂಜಿಬೆಟ್ಟು ಶಾರದಾಮಂಟಪದಲ್ಲಿ ಪ್ರಥಮ ಸ್ಥಾನಿಕ ಬ್ರಾಹ್ಮಣ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ಒಟ್ಟು ಸಾಮಾಜಿಕ ಜೀವನದಲ್ಲಿ ಸಾಹಿತ್ಯಕ್ಕೆ ಆದ್ಯತೆ ಕಡಿಮೆಯಾಗಿದೆ. ಬರೆಯುವವರ ಸಂಖ್ಯೆ ಹೆಚ್ಚಿದೆ. ಆದರೂ ಸತ್ವಪೂರ್ಣ ಬರವಣಿಗೆ ಕಡಿಮೆಯಾಗಿದೆ. ಸಾಹಿತ್ಯ ಬೆಳೆಯಬೇಕಾದರೆ ಪ್ರೌಢ ಭಾಷೆಬೇಕು. ಬೌದ್ಧಿಕವಾಗಿ ಹಾಗೂ ಭಾವನಾತ್ಮಕವಾಗಿ ಸಾಹಿತ್ಯ ಬೆಳೆದಿರಬೇಕು. ಸಾಹಿತ್ಯದಿಂದ ಅನುಭವ ವಿಸ್ತರಣೆ, ಸಂವೇದನೆಗಳ ಪರಿಷ್ಕರಣೆ ಮತ್ತು ರಸಾನುಭವದ ಪ್ರಾಪ್ತಿ ಸಾಧ್ಯವಾಗುತ್ತದೆ ಎಂದರು. ಈ ಸಮ್ಮೇಳನಕ್ಕೆ ನಮ್ಮ ಸಮಾಜಬಾಂಧವರ ಅಭೂತಪೂರ್ವ ಪ್ರತಿಕ್ರಿಯೆ ದೊರೆತಿದೆ. ಇದೊಂದು ಒಳ್ಳೆಯ ಬೆಳವಣಿಗೆ. ನಮ್ಮವರಲ್ಲಿರುವ ಸಾಹಿತ್ಯ ಪ್ರೀತಿಗೆ ದ್ಯೋತಕ ಎಂದರು. ಸ್ಥಾನಿಕ ಬ್ರಾಹ್ಮಣ ಕನ್ನಡ ಸಮ್ಮೇಳನವನ್ನು ರಾಜ್ಯೋತ್ಸವ ರಾಜ್ಯ ಪ್ರಶಸ್ತಿ ವಿಜೇತ ಭಾಗವತ, ಗಮಕಿ ನೀಲಾವರ ಲಕ್ಷ್ಮೀನಾರಾಯಣರಾವ್ ದೀಪ ಬೆಳಗಿಸಿ ಉದ್ಘಾಟಿಸಿದರು. ಆರಂಭದಲ್ಲಿ ನಮ್ಮ ಸಮಾಜದ ಹಿರಿಯ ಚೇತನ, ಆಶುಕವಿ, ಪ್ರಸಿದ್ಧ

(5ನೇ ಪುಟಕ್ಕೆ ...)

## ಉಡುಪಿ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘದ ವಾರ್ಷಿಕ ಮಹಾಸಭೆ

ತಾ.16-12-2007ರಂದು ಉಡುಪಿಯ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘದ ವಾರ್ಷಿಕ ಮಹಾಸಭೆಯು ಉಡುಪಿ ಕುಂಜಿಬೆಟ್ಟಿನ ಶ್ರೀ ಶಾರದಾ ಮಂಟಪದಲ್ಲಿ ನೆರವೇರಿತು. ಸಂಘದ ಅಧ್ಯಕ್ಷರಾದ ಶ್ರೀ ಸಿ. ಎಸ್. ರಾಯರ ಅಧ್ಯಕ್ಷತೆಯಲ್ಲಿ ಜರುಗಿದ ಸಭೆಯಲ್ಲಿ ಕು। ವೃಂದಾ ಕೆ. ರಾವ್ ಮಟ್ಟು ಪ್ರಾರ್ಥನೆ ಮಾಡಿದರು.

ಅಧ್ಯಕ್ಷರಾದ ಶ್ರೀ ಸಿ.ಎಸ್ ರಾಯರು ತಮ್ಮ ಸ್ವಾಗತ ಭಾಷಣದಲ್ಲಿ ಸಂಘವು ನಡೆದು ಬಂದ ದಾರಿಯ ಸಿಂಹಾವಲೋಕನ ಮಾಡುತ್ತಾ ಎಲ್ಲರನ್ನೂ ಸ್ವಾಗತಿಸಿದರು.

2005-06ನೇ ಸಾಲಿನ ಮಹಾಸಭೆಯ ವರದಿಯನ್ನು ಸಂಘದ ಕಾರ್ಯದರ್ಶಿಗಳಾದ ಶ್ರೀ ಪ್ರಫುಲ್ಲಚಂದ್ರರಾಯರು ಸಭೆಯ ಮುಂದಿಟ್ಟರು. ಚರ್ಚೆಯ ನಂತರ ಸೂಕ್ತ ತಿದ್ದುಪಡಿಯೊಂದಿಗೆ ವರದಿಯು ಅಂಗೀಕರಿಸಲ್ಪಟ್ಟಿತು. ನಂತರ 2006-07ನೇ ಸಾಲಿನ ವರ್ಷದ ಕಾರ್ಯಕ್ರಮದ ವರದಿಯನ್ನು ಮಂಡಿಸಿ ಅಂಗೀಕರಿಸಲಾಯಿತು. 2006-07ರ ಆಯವ್ಯಯ ಮತ್ತು ಆಸ್ತಿ ಜವಾಬ್ದಾರಿಗಳ ತಖ್ತೆಯನ್ನು ಕೋಶಾಧಿಕಾರಿ ಶ್ರೀ ಎಮ್. ಸದಾನಂದರಾವ್ ಮಂಡಿಸಿ ಸಭೆಯ ಮಂಜೂರಾತಿಯನ್ನು ಪಡೆದರು.

ಜತೆಕಾರ್ಯದರ್ಶಿ ಶ್ರೀ ಕೃಷ್ಣಕುಮಾರ್ ರಾವ್ ಮಟ್ಟು ಅವರ ವಂದನಾರ್ಪಣೆಯೊಂದಿಗೆ ಸಭೆಯು ಮುಕ್ತಾಯವಾಯಿತು.

ಉಡುಪಿಯ ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘದ ಆಡಳಿತ ಮಂಡಳಿಯ ಸಭೆಯು ಅದೇ ದಿನ ಮಧ್ಯಾಹ್ನ ಸಂಘದ ಅಧ್ಯಕ್ಷ ಶ್ರೀ ಸಿ.ಎಸ್. ರಾಯರ ಅಧ್ಯಕ್ಷತೆಯಲ್ಲಿ ನೆರವೇರಿತು. ಸಂಘದ ಆಡಳಿತ ಮಂಡಳಿಯ ಸದಸ್ಯತ್ವಕ್ಕೆ ಶ್ರೀ ಪಿ.ಎಂ. ನಾಗರಾಜ್ ತನ್ನ ವೈಯಕ್ತಿಕ ಕಾರ್ಯಬಾಹುಳ್ಯದಿಂದಾಗಿ ನೀಡಿದ ರಾಜೀನಾಮೆಯನ್ನು ಸಭೆಯು ಅಂಗೀಕರಿಸಿತು. ತೆರವಾದ ಸ್ಥಾನಕ್ಕೆ ಶ್ರೀ ವೈ. ಭುವನೇಂದ್ರರಾಯರನ್ನು ಸರ್ವಾನುಮತದಿಂದ ಆರಿಸಲಾಯಿತು.

ಶ್ರೀ ಯು.ಪ್ರಫುಲ್ಲಚಂದ್ರ ರಾಯರು ಸಂಘದ ಕಾರ್ಯದರ್ಶಿ ಸ್ಥಾನಕ್ಕೆ ತನ್ನ ವೈಯಕ್ತಿಕ ಕಾರಣದಿಂದ ನೀಡಿದ ರಾಜೀನಾಮೆಯನ್ನು ಸಭೆಯು ಅಂಗೀಕರಿಸಿ ಕಾರ್ಯದರ್ಶಿ ಸ್ಥಾನಕ್ಕೆ ಶ್ರೀ ವೈ.ಭುವನೇಂದ್ರ ರಾಯರನ್ನು ಸರ್ವಾನುಮತದಿಂದ ಆರಿಸಿತು. ಸಂಘದ ಸಲಹಾ ಸಮಿತಿಯ ಸದಸ್ಯರಾದ ಶ್ರೀ ಎಂ. ಪಾಲಚಂದ್ರರಾಯರು ಶ್ರೀ ಪ್ರಫುಲ್ಲಚಂದ್ರ ರಾಯರು ಸಂಘಕ್ಕೆ ಮಾಡಿದ ಸೇವೆಯನ್ನು ಸ್ಮರಿಸಿ ಶ್ರೀ ಶಾರದಾ ಪತ್ರಿಕೆ, ಹಿಂದೆ ಇದ್ದ ಯುವ ವಿಭಾಗ ಹಾಗೂ ಶ್ರೀ ಶಾರದಾ ಕ್ರೆಡಿಟ್ ಕೋ-ಅಪರೇಟಿವ್ ಸೊಸ್ಯಾಟಿಯ ಸ್ಥಾಪನೆಗೆ ಅವರ ಕೊಡುಗೆ ಮಹತ್ವವಾದುದು ಎಂದು ಅಭಿನಂದಿಸಿದರು. ಹಾಗೆಯೇ ಅವರಿಂದ ಇನ್ನೂ ಹೆಚ್ಚಿನ ಸೇವೆ, ಮಾರ್ಗದರ್ಶನ ಸಂಘಕ್ಕೆ ಅಗತ್ಯವಿದೆ ಎಂದು ತಿಳಿಸಿದರು. ಶ್ರೀ ಪ್ರಫುಲ್ಲ ಚಂದ್ರರಾಯರು ತನ್ನ ಕಾರ್ಯದರ್ಶಿ ಅವಧಿಯಲ್ಲಿ ಸಹಕರಿಸಿದ ಎಲ್ಲರಿಗೆ ಧನ್ಯವಾದವನ್ನು ಹೇಳಿ ನೂತನ ಕಾರ್ಯದರ್ಶಿಯವರನ್ನು ಅಭಿನಂದಿಸಿದರು. ನೂತನ ಕಾರ್ಯದರ್ಶಿ ಶ್ರೀ ವೈ. ಭುವನೇಂದ್ರ ರಾಯರು ಎಲ್ಲ ಸದಸ್ಯರ ಬೆಂಬಲದೊಂದಿಗೆ ತನ್ನ ಜವಾಬ್ದಾರಿಯನ್ನು ಪ್ರಾಮಾಣಿಕವಾಗಿ ನೆರವೇರಿಸುತ್ತೇನೆಂದು ಭರವಸೆ ನೀಡಿದರು. ಜತೆ ಕಾರ್ಯದರ್ಶಿ ಶ್ರೀ ವೇಣುಗೋಪಾಲ್‌ರಾವ್ ಧನ್ಯವಾದ ಅರ್ಪಿಸಿದರು.

**ನೂತನ ಆಡಳಿತ ಮಂಡಳಿ**

ಗೌರವಾಧ್ಯಕ್ಷರಾಗಿ ಶ್ರೀ ಅಂಬಲಪಾಡಿ ಕೃಷ್ಣರಾವ್, ಅಧ್ಯಕ್ಷರಾಗಿ ಶ್ರೀ ಸಿ.ಎಸ್. ರಾವ್. ಉಪಾಧ್ಯಕ್ಷರಾಗಿ ಎಸ್.ಎಂ. ರಾವ್ ಹಾಗೂ ವೈ. ಸರ್ವಜ್ಞಮೂರ್ತಿ, ಕಾರ್ಯದರ್ಶಿಯಾಗಿ ವೈ. ಭುವನೇಂದ್ರರಾವ್, ಕೋಶಾಧಿಕಾರಿಯಾಗಿ ಎಂ. ಸದಾನಂದ ರಾವ್, ಜತೆ ಕಾರ್ಯದರ್ಶಿಗಳಾಗಿ ಕೃಷ್ಣಕುಮಾರ್‌ರಾವ್ ಮಟ್ಟು ಮತ್ತು ಕೆ.ವೇಣುಗೋಪಾಲ್‌ರಾವ್, ಸದಸ್ಯರಾಗಿ ಯು. ಪ್ರಫುಲ್ಲಚಂದ್ರ ರಾವ್, ವೈ. ಮೋಹನ್ ರಾವ್, ಯು. ಅರವಿಂದ ಕುಮಾರ್, ಕೆ. ಎಸ್. ಭಾಸ್ಕರರಾವ್, ಬಿ.ರಾಮಚಂದ್ರರಾವ್, ವೈ. ಮುರಳಿಕೃಷ್ಣರಾವ್, ಕೆ.ಎಸ್. ಪ್ರಭಾಕರ ರಾವ್, ಐ.ಕೆ. ಜಯಚಂದ್ರರಾವ್, ಬಿ. ಜಯರಾಮ ರಾವ್, ಡಾ। ವೈ. ಸುದರ್ಶನ್ ರಾವ್, ಸಿ.ದೇವರಾವ್, ಕರಂಬಳ್ಳಿ ವೆಂಕಟರಾವ್, ಜಯಲಕ್ಷ್ಮಿ ಎಂ. ರಾವ್, ಟಿ.ಸುರೇಶ್ ರಾವ್, ಕೇದಿಗೆ ವಸಂತ ರಾವ್, ಮಹಾಲಕ್ಷ್ಮಿ ಎನ್. ಶ್ಯಾನುಭಾಗ್, ಎಂ. ಕೆ. ದಿವಾಕರ್ ರಾವ್, ಕರಂದಾಡಿ ವಾಸುದೇವ ರಾವ್, ಎ. ಭಾಗ್ಯಚಂದ್ರ ರಾವ್, ಡಾ। ಬೈಕಾಡಿ ಸೂರ್ಯ ನಾರಾಯಣರಾವ್ ಮುಂದುವರಿಯಲಿದ್ದಾರೆ.

**ಸಲಹಾ ಮಂಡಳಿ :** ಡಾ। ಪಿ. ವಿಠಲ ರಾವ್, ಎಂ.ಪಾಲಚಂದ್ರ ರಾವ್, ಕೆ. ರಮೇಶ ಶ್ಯಾನುಭಾಗ್ ಸತಾರ, ಬೈಲಕೆರೆ ನಾರಾಯಣ, ಕೆ.ಜಯರಾಮ ಶಾಸ್ತ್ರಿ.

**ನೂತನವೇದಿಕೆಗಳಿಗೆ ಆಯ್ಕೆ :**

**ಶಾರದಾ ಮಂಟಪ ವೇದಿಕೆ :** ಕೃಷ್ಣಮೂರ್ತಿರಾವ್ (ಅಧ್ಯಕ್ಷರು), ಡಾ। ಸೂರ್ಯನಾರಾಯಣರಾವ್ ಬೈಕಾಡಿ (ಉಪಾಧ್ಯಕ್ಷರು), ಎ. ಭಾಗ್ಯಚಂದ್ರರಾವ್ (ಸಂಚಾಲಕರು)

**ಶಾರದಾ ದೇವಸ್ಥಾನ ವೇದಿಕೆ :** ವಾಸುದೇವರಾವ್ ಬಿ. (ಅಧ್ಯಕ್ಷರು), ಸುರೇಶ್ ರಾವ್ ಟಿ. (ಉಪಾಧ್ಯಕ್ಷರು), ಉಷಾ ಮೋಹನ್‌ದೇವ್ (ಸಂಚಾಲಕರು)

**ಶ್ರೀಶಾರದಾ ವೇದಿಕೆ :** ವೈ. ಮೋಹನ್ ರಾವ್ ವೈ.(ಅಧ್ಯಕ್ಷರು), ಎಚ್.ಎನ್.ಶ್ಯಾನುಭಾಗ್ (ಉಪಾಧ್ಯಕ್ಷರು), ಅರವಿಂದ ಕುಮಾರ್ (ಸಂಚಾಲಕರು)

**ವಿದ್ಯಾರ್ಥಿವೇತನ ವೇದಿಕೆ :** ಕೆ.ಎಸ್. ಪ್ರಭಾಕರರಾವ್ (ಅಧ್ಯಕ್ಷರು), ವೈ. ವಿಠಲರಾವ್ (ಉಪಾಧ್ಯಕ್ಷರು), ರವೀಂದ್ರಭಂಡಿ (ಸಂಚಾಲಕರು)

**ಶಿಕ್ಷಣ ಮತ್ತು ತರಬೇತಿ ವೇದಿಕೆ :** ಡಾ। ವೈ.ರವೀಂದ್ರನಾಥ ರಾವ್ (ಅಧ್ಯಕ್ಷರು), ವೈ. ಸರ್ವಜ್ಞಮೂರ್ತಿ (ಉಪಾಧ್ಯಕ್ಷರು), ಪ್ರಭಾಕರ ಭಂಡಿ (ಸಂಚಾಲಕರು)

**ವಧೂವರರ ಮಾಹಿತಿ ವೇದಿಕೆ :** ಕೆ. ವಸಂತ ರಾವ್ (ಅಧ್ಯಕ್ಷರು), ಜಯಲಕ್ಷ್ಮೀ ಮುರಳೀಧರ ರಾವ್ (ಉಪಾಧ್ಯಕ್ಷರು), ಸುರೇಶ್‌ರಾವ್ ಕುತ್ಪಾಡಿ (ಸಂಚಾಲಕರು)

**ಕಟ್ಟಡ ನಿರ್ಮಾಣ ವೇದಿಕೆ :** ಎಸ್.ಎಮ್.ರಾವ್ (ಅಧ್ಯಕ್ಷರು), ಜಯರಾಮ ಶಾಸ್ತ್ರಿ (ಉಪಾಧ್ಯಕ್ಷರು), ಸಿ.ದೇವರಾವ್ (ಸಂಚಾಲಕರು)

**ಕಲೆ ಮತ್ತು ಸಂಸ್ಕೃತಿ :** ಕೃಷ್ಣಮೂರ್ತಿರಾವ್ ಬ್ರಹ್ಮಾವರ (ಅಧ್ಯಕ್ಷರು), ಕೇದಿಗೆ ವಸಂತರಾವ್ (ಉಪಾಧ್ಯಕ್ಷರು), ನಾಗೇಶ್‌ರಾವ್ ಬಿ. (ಸಂಚಾಲಕರು)

**ಕ್ರೀಡಾ ವೇದಿಕೆ :** ರಾಮಚಂದ್ರರಾವ್ ಬಿ. (ಅಧ್ಯಕ್ಷರು), ಮಂಜುನಾಥ ಹೆಬ್ಬಾರ್ (ಉಪಾಧ್ಯಕ್ಷರು), ದೇವದಾಸ್ ಶಾಸ್ತ್ರಿ (ಸಂಚಾಲಕರು)

**ವೈದ್ಯಕೀಯ ನೆರವು ವೇದಿಕೆ :** ಡಾ। ಲೋಕೇಶ್ ರಾವ್ ಬಿ.ಕೆ. (ಅಧ್ಯಕ್ಷರು), ಡಾ। ಸಿ.ಜಿ.ರಮೇಶ್ ರಾವ್ (ಉಪಾಧ್ಯಕ್ಷರು), ಡಾ। ವೈ.ಸುದರ್ಶನ್‌ರಾವ್ (ಸಂಚಾಲಕರು)

**ಸದಸ್ಯತನ ವೇದಿಕೆ :** ಯು.ಪ್ರಫುಲ್ಲಚಂದ್ರ (ಅಧ್ಯಕ್ಷರು), ಪ್ರಕಾಶ್‌ರಾವ್ ಕೋಲ್ಪೆ (ಉಪಾಧ್ಯಕ್ಷರು), ವಿಶ್ವನಾಥ್ ಶ್ಯಾನುಭಾಗ್ (ಸಂಚಾಲಕರು)

**ಯುವ ವೇದಿಕೆ :** ಎಮ್.ಕೆ. ದಿವಾಕರ್ ರಾವ್ (ಅಧ್ಯಕ್ಷರು), ದೇವರಾಜ ಶಾಸ್ತ್ರಿ ಹಿರಿಯಡ್ಕ (ಉಪಾಧ್ಯಕ್ಷರು), ಪಿ.ಎಮ್.ನಾಗರಾಜ (ಸಂಚಾಲಕರು)

**ಮಹಿಳಾ ವೇದಿಕೆ :** ಗೀತಾ ಕೃಷ್ಣಕುಮಾರ್ (ಅಧ್ಯಕ್ಷರು), ಮಹಾಲಕ್ಷ್ಮೀ ಎನ್.ಶ್ಯಾನುಭಾಗ್ (ಉಪಾಧ್ಯಕ್ಷರು), ಭುವನೇಶ್ವರಿ ಐ.ಪಿ. (ಸಂಚಾಲಕರು)

**ಆಂತರಿಕ ಲೆಕ್ಕಪರಿಶೋಧಕರು :** ಕರಂಬಳ್ಳಿ ವೆಂಕಟ್ರಾವ್ ಮತ್ತು ಕೆ.ಎಸ್.ಭಾಸ್ಕರರಾವ್